
## ಮರಕ್ಕೆ ಮೊರದಂತಹ ಕಿವಿಗಳು

‘ಶಿಲೀಂಧ್ರ’ ಎಂದು ಕರೆಯುವ ಅಣಬೆ ಜಾತಿಯ ವೈವಿಧ್ಯ ಜೀವ ಜಗತ್ತಿದೆ. ನಾನು ತೇಜಸ್ವಿಯವರ ‘ಕರ್ವಾಲೋ’ ಕಾದಂಬರಿ ಓದುವಾಗ ಹಾರುವಹಲ್ಲಿ ಹುಡುಕಾಟದಲ್ಲಿ ಮಲೆನಾಡಿನ ನಾರ್ವೆ ಎಂಬ ಅರಣ್ಯದಲ್ಲಿ ಮಂದಣ್ಣ, ಕರಿಯಪ್ಪ, ಪ್ರಭಾಕರ್ ಮತ್ತು ಅಲ್ಲಿ ಅಲೆಯುತ್ತಿರುತ್ತಾರೆ. ಅವರು ಮೊರದಷ್ಟು ಅಗಲವಾದ ಮರದ ಅಣಬೆಗಳನ್ನು ನೋಡಿ ಮೂಕವಿಸ್ಮಿತರಾಗಿ ಉದ್ಗಾರ ತೆಗೆಯುತ್ತಾರೆ. ಇದು ನನ್ನ ಜ್ಞಾಪಕದಲ್ಲಿ ಇತ್ತು. ನಾವು ಬೆಳಗಿನ ವಾಯು ವಿಹಾರದಲ್ಲಿದ್ದಾಗ ಅಡುಮಲ್ಲೇಶ್ವರ ಅರಣ್ಯ ಪ್ರದೇಶದಲ್ಲಿ ಈಚೆಗೆ ಅಂತಹ ಜಾತಿಯ ಅಣಬೆ ಕಂಡು ಬೆರಗಾದೆವು. ಚಾರಣಪ್ರಿಯ ಮಿತ್ರರಾದ ದಿನೇಶ್ ಈ ಚಿತ್ರವನ್ನು ಸೆರೆಹಿಡಿದರು.

—ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ





## ತಾಳಗುಪ್ಪದಲ್ಲಿ 45 ಟನ್ ಕ್ರೇನ್..

ತಾಳಗುಪ್ಪದ ರೈಲ್ವೆ ನಿಲ್ದಾಣದಲ್ಲಿ ಇರುವ ಈ ಕ್ರೇನ್ 1938–40ರಲ್ಲಿ ನಿರ್ಮಿಸಲಾಗಿದೆ. ಆಗ ಹಿರೇಭಾಸ್ಕರ ಅಣೆಕಟ್ಟು ಮತ್ತು ಮಹಾತ್ಮಗಾಂಧಿ ವಿದ್ಯುದಾಗಾರಗಳ ನಿರ್ಮಾಣಕ್ಕೆ ರೈಲಿನಿಂದ ಬರುತ್ತಿದ್ದ ಕಚ್ಚಾ ವಸ್ತುಗಳನ್ನು ಮತ್ತೊಂದು ವಾಹನಕ್ಕೆ ಎತ್ತಿಹಾಕಲು ಬಳಸುತ್ತಿದ್ದರು.

ಇದನ್ನು ಇಂಗ್ಲೆಂಡಿನ ಹರ್ಬರ್ಟ್ ಮಾರಿಸ್ ಲಿಮಿಟೆಡ್ ಕಂಪನಿಯು ನಿರ್ಮಿಸಿತ್ತು. ಮಾನವ ಚಾಲಿತವಾಗಿದ್ದ ಇದು 45ಟನ್ ಸಾಮರ್ಥ್ಯವನ್ನು ಹೊಂದಿತ್ತು. ಈ ಕ್ರೇನಿನ ಬಳಿ ರೈಲುಗಳು ಬರುವಂತೆ ಅದರ ಪಕ್ಕದಲ್ಲೇ ಹಳಿಗಳನ್ನು ಹಾಸಲಾಗಿತ್ತು. ಈ ಕ್ರೇನ್ ಮೀಟರ್ ಗೇಜ್ ರೈಲು ಇರುವ ತನಕ ಕಾರ್ಯನಿರ್ವಹಿಸುತ್ತಿತ್ತು. ಈಗ ಇದು ಕೇವಲ ಅಂದಿನ ಕಾಲದ ಕುರುಹು ಆಗಿ ಅಷ್ಟೇ ಉಳಿದಿದೆ.

—ಅಂಜನ್ ಕಾಯ್ಕಿಣಿ, ಸಾಗರ

## ಲೋಹದ್ದಲ್ಲ ಮಣ್ಣಿನ ಹೂಜಿ!

ಹೀಗೆ ನೋಡಿದರೆ ಕಂಚಿನದೋ ಇನ್ನಾವುದಾದರೂ ಲೋಹದಿಂದ ತಯಾರಿಸಿರಬಹುದೋ ಎಂದು ಭಾಸವಾಗುವ ಈ ಚಿತ್ರಮಯವಾದ ಕಲಾತ್ಮಕವಾದ ಹೂಜಿ ಮಣ್ಣಿನದು ಎಂದರೆ ಅಚ್ಚರಿಯಾಗುತ್ತದೆಯಲ್ಲವೆ? ಬೆಳ್ತಂಗಡಿಯಲ್ಲಿರುವ ಕಾಶ್ಮೀರ್ ಮಿನೇಜಸ್ ಐವತ್ತು ವರ್ಷಗಳ ಹಿಂದೆ ರಾಜಸ್ಥಾನದಲ್ಲಿ ಮಿಲಿಟರಿ ಶಾಲೆಯ ಶಿಕ್ಷಕರಾಗಿದ್ದಾಗ ಅಲ್ಲಿಂದ ತಂದ ಸ್ಥಳೀಯ ಕುಂಬಾರರು ತಯಾರಿಸಿದ ಹೂಜಿ ಬಲು ದೃಢವಾಗಿದ್ದು ತಂಪುನೀರು ಕೊಡುತ್ತಿದೆ.

—ಪ. ರಾಮಕೃಷ್ಣ ಶಾಸ್ತ್ರಿ

